

ಮತ್ತೆ ಮಳೆ ಹುಯ್ಯುತಿದೆ... ಹಳ್ಳಕೊಳ್ಳ ತೊರೆಗಳು ನದಿಗಳು ಜೀವ ತುಂಬಿಕೊಂಡಿವೆ. ಜಲಪಾತಗಳಲ್ಲೀಗ ಜೀವೋತ್ಕರ್ಷ. ಬೆಟ್ಟ ಬಯಲುಗಳಲ್ಲಿ ಹಸಿರಿನ ಪ್ರಭಾತಪೇರಿ. ನಾಡಿಗೆ ನಾಡೇ ಮೈದೊಳೆದುಕೊಂಡಂತೆ ಮಳೆಕನ್ನಡಿಯಲ್ಲಿ ಹೊಸ ಹೊಳಪು ಪಡೆದುಕೊಂಡಿದೆ. ಮನೋಲ್ಲಾಸ ಹೊಂದುವುದರೊಂದಿಗೆ ಸಮಾಜದ ವೈವಿಧ್ಯವನ್ನು ಅರಿಯಲು ಪ್ರವಾಸ ಅಗತ್ಯವಷ್ಟೇ. ಸಮಾಜದೊಂದಿಗೆ ಪ್ರಕೃತಿಯ ಬಹುರೂಪವನ್ನು ಅರಿಯಲು, ಪ್ರಕೃತಿಯ ಜೀವಕಾರುಣ್ಯವನ್ನು ಅರಿಯಲು, ಅಸದಳ ಚೆಲುವನ್ನು ಆಸ್ವಾದಿಸಲು ಮಳೆ ದಿನಗಳಿಗಿಂತಲೂ ಸೂಕ್ತ ಕಾಲವಿಲ್ಲ. 'ಮಳೆ ಪ್ರವಾಸ'ಕ್ಕೆ ಹೊರಡುವಂತೆ ಸಹೃದಯರನ್ನು ಒತ್ತಾಯಿಸಲು ಈ ಆರ್ದ್ರ ಮಳೆ ಕಥನ.

■ ಪ್ರಸಾದ ಶೆಣೈ ಆರ್‌.ಕೆ.

ಚಿತ್ರಗಳು ಲೇಖಕರವು